# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001

ದೂರವಾಣಿ : 080-22265383 ಫ್ಯಾಕ್ಸ್ : 080-22267901

ವೆಬ್‌ಸೈಟ್ : www.kiadb.in ಇ-ಮೇಲ್ : ceoemkiadb@gmail.com

ಸಂ. ಕ.ಕೈ.ಪ್ರ.ಅ.ಮಂ/ಕೇ.ಕ/14589-III/ 578 /2021-22 ದಿನಾಂಕ: 15-04-2021

::ಸುತ್ತೋಲೆ::

ವಿಷಯ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದ ಉದ್ದಿಮೆದಾರರಿಗೆ ಮಂಡಳಿ ವತಿಯಿಂದ ಹಂಚಿಕೆಯಾಗುವ ಕೈಗಾರಿಕಾ ನಿವೇಶನಗಳಿಗೆ ಶೇ.75% ರಿಯಾಯಿತಿ ನೀಡುವ ಬಗ್ಗೆ.

ಉಲ್ಲೇಖ : 1. ಕಛೇರಿ ಸುತ್ತೋಲೆ ಸಂ: ಕ.ಕೈ.ಪ್ರ.ಅ.ಮಂ/ಕೇ.ಕ/14589-3/ 9632/2016-17 ದಿನಾಂಕ:22-09-2016.
2. ಸರ್ಕಾರದ ಆದೇಶ ಸಂ:ಸಿಐ 76 ಸಪ್ರಕೈ 2019 ಬೆಂಗಳೂರು ದಿನಾಂಕ:28-05-2020.
3. ಸರ್ಕಾರದ ಆದೇಶ ಸಂ:ಸಿಐ 76 ಎಸ್‌ಎಸ್‌ಐ 2019 ಬೆಂಗಳೂರು ದಿನಾಂಕ: 16-02-2021.

****

ಸರ್ಕಾರಿ ಆದೇಶ ಸಂಖ್ಯೆ: ಸಿಐ76 ಸಪ್ರಕೈ 2019 ದಿನಾಂಕ:28-05-2020ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕೈಗಾರಿಕಾ ನಿವೇಶನ/ಶೆಡ್‌ಗಳನ್ನು ನೀಡುವಲ್ಲಿ ಹಾಲಿ ಇರುವ ಸಹಾಯಧನವನ್ನು ಶೇ.50 ರಿಂದ ಶೇ.75ಕ್ಕೆ ಹೆಚ್ಚಿಸಿ ಜಾರಿಗೊಳಿಸಲಾಗಿದ್ದು ಸದರಿ ಆದೇಶದಲ್ಲಿ ವಿಧಿಸಲಾಗಿರುವ ಷರತ್ತು ಮತ್ತು ನಿಬಂಧನೆಗಳನ್ನು ಈ ಕೆಳಕಂಡಂತೆ ಮಾರ್ಪಡಿಸಿ ಸರ್ಕಾರವು ತಿದ್ದುಪಡಿ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಸಿಐ 76 ಎಸ್‌ಎಸ್‌ಐ 2019 ದಿನಾಂಕ: 16-02-2021ರಲ್ಲಿ ಹೊರಡಿಸಿರುತ್ತದೆ:-

1. ಶೇ.75 ರಷ್ಟು ಭೂ ಸಹಾಯಧನ ಸೌಲಭ್ಯವನ್ನು 2019-20ನೇ ಸಾಲಿನಿಂದ ಕೆಐಎಡಿಬಿ ಹಾಗೂ ಕೆಎಸ್‌ಎಸ್‌ಐಡಿಸಿ ಸಂಸ್ಥೆಗಳಿಂದ ಭೂ ಹಂಚಿಕೆ ಪಡೆದಿರುವ ಹಂಚಿಕೆದಾರರಿಗೆ ಪೂರ್ವಾನ್ವಯವಾಗಿ ದಿನಾಂಕ:01-04-2019 ರಿಂದ ನೀಡುವುದು.
2. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಫಲಾನುಭವಿಯೊಬ್ಬರಿಗೆ ಗರಿಷ್ಠ 2 ಎಕರೆ ಜಮೀನನ್ನು ಶೇ.75 ರಷ್ಟು ರಿಯಾಯಿತಿ ದರದಲ್ಲಿ ನೀಡಬಹುದು.
3. ಕರ್ನಾಟಕ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದಿಂದ ನಿವೇಶನ/ಶೆಡ್‌ಗಳ ಮೇಲೆ ನೀಡುವ ರಿಯಾಯಿತಿಯು ಒಟ್ಟು ದರದ ಶೇ.75 ರಷ್ಟು ಆಗಿರುತ್ತದೆ.
4. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮ ನಿಯಮಿತ ಗಳಿಂದ ಹಂಚಿಕೆ ಮಾಡಿ ನಿವೇಶನ/ಶೇಡ್‌ನ ಶೇ.75 ರಷ್ಟು ರಿಯಾಯಿತಿ ಪರಿಗಣಿಸಿ ಉಳಿದ ಮೊತ್ತ ಪಾವತಿಸಲು ಫಲಾನುಭವಿಗೆ ಹಂಚಿಕೆ ಪತ್ರ ನೀಡಬೇಕು. ಹಂಚಿಕೆ ಪತ್ರದಲ್ಲಿ ನಮೂದಿಸಿದ ಬಾಕಿ (ಶೇ.25) ಮೊತ್ತದ ಶೇ.10 ರಷ್ಟು ಮೊತ್ತ ಪಾವತಿಸಿದ ನಂತರ ನಿವೇಶನವನ್ನು ಫಲಾನುಭವಿಗೆ ಸ್ವಾಧೀನ ಪತ್ರದ ಮೂಲಕ ನೀಡುವುದು. ಉಳಿದ ಶೇ.15 ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ ದಿನಾಂಕದಿಂದ 8 ತ್ರೈಮಾಸಿಕ ಸಮ ಕಂತುಗಳಲ್ಲಿ ಬಡ್ಡಿ ಸಹಿತವಾಗಿ ಪಡೆಯಬೇಕು. ಫಲಾನುಭವಿಯು ಸಲ್ಲಿಸಿದ ಜಾತಿ ಪ್ರಮಾಣ ಪತ್ರದ ಪ್ರತಿ, ಆಧಾರ್ ಸಂಖ್ಯೆ ದಾಖಲಾತಿ ಮತ್ತು ಸ್ವಾಧೀನ ನೀಡಲಾದ ಪತ್ರದ ಪ್ರತಿಯನ್ನು ದೃಢೀಕರಿಸಿ ಸದರಿ ಮಂಡಳಿ/ನಿಗಮದ ಕಛೇರಿಯಲ್ಲಿಯೇ ನಿರ್ವಹಿಸುವುದು ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಫಲಾನುಭವಿಯ ವಿವರಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.

--2

5. ಪ್ರಸ್ತಾವೆಯನ್ನು ಪರಿಶೀಲಿಸಿ ಉದ್ದಿಮೆದಾರರು ಈಗಾಗಲೇ ಸ್ವಾಧೀನ ಪಡೆದಿರುವ ನಿವೇಶನ/ಶೆಡ್ ಗಳಿಗೆ ನಿಯಮಾವಳಿಯಂತೆ ಅರ್ಹವಿರುವ ಶೇ.75 ರಷ್ಟು ರಿಯಾಯಿತಿ ಮೊತ್ತವನ್ನು ಸರ್ಕಾರದಿಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮ ನಿಯಮಿತ ಗೆ ಮರುಪಾವತಿ ಮಾಡಲಾಗುವುದು.

6. ಶೇ.75 ರಷ್ಟು ರಿಯಾಯಿತಿ ಮೌಲ್ಯವನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ (ಎಸ್.ಸಿ.ಪಿ/ಟಿ.ಎಸ್.ಪಿ) ಅಡಿಯಲ್ಲಿ ಹಂಚಿಕೆಯಾಗುವ ಆಯವ್ಯಯದಿಂದ ಭರಿಸತಕ್ಕದ್ದು ಮತ್ತು ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ ಈ ಕಾರ್ಯಕ್ರಮಕ್ಕೆ ರೂಪಿಸಲಾಗಿರುವ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.

7. ತದನಂತರ ಉಪಯುಕ್ತತಾ ಪ್ರಮಾಣ ಪತ್ರವನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಕ್ಕೆ ಸೇರಿದ ಉದ್ದಿಮೆದಾರರಿಗೆ ನಿವೇಶನಗಳನ್ನು ಹಂಚಿಕೆ ಮಾಡುವಾಗ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಸದರಿ ಆದೇಶದಂತೆ ಕ್ರಮವಹಿಸಲು ಹಾಗೂ ಹಂಚಿಕೆದಾರರು ಮನವಿ ಸಲ್ಲಿಸುವುದನ್ನು ನಿರೀಕ್ಷಿಸದೆ ಮಂಡಳಿ ವತಿಯಿಂದ ದಿನಾಂಕ:01-04-2019 ರಿಂದ ಶೇ.50 ರಷ್ಟು ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಿರುವ ಪ್ರಕರಣಗಳಿಗೆ ಶೇ.75% ರಷ್ಟು ರಿಯಾಯಿತಿ ದರವನ್ನು ಅನ್ವಯಿಸಿ ಪರಿಷ್ಕೃತ ಲೆಕ್ಕಾಚಾರದೊಂದಿಗೆ ಬಾಕಿ ಹಣವನ್ನು ಪಾವತಿಸಲು ಎಲ್ಲಾ ಫಲಾನುಭವಿಗಳಿಗೆ 30 ದಿನಗಳೊಳಗಾಗಿ ತಿಳಿಸಲು ಈ ಮೂಲಕ ಸೂಚಿಸಲಾಗಿದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು

ಗೆ,

1. ಜಂಟಿ ನಿರ್ದೇಶಕರು, ಕ.ಕೈ.ಪ್ರ.ಅ.ಮಂ, ಕೇಂದ್ರ ಕಛೇರಿ, ಬೆಂಗಳೂರು.
2. ಕಾರ್ಯದರ್ಶಿ-1, ಕ.ಕೈ.ಪ್ರ.ಅ.ಮಂ, ಕೇಂದ್ರ ಕಛೇರಿ ಬೆಂಗಳೂರು.
3. ಕಾರ್ಯದರ್ಶಿ-2, ಕ.ಕೈ.ಪ್ರ.ಅ.ಮಂ, ಕೇಂದ್ರ ಕಛೇರಿ ಬೆಂಗಳೂರು
4. ಕಾರ್ಯಪಾಲಕ ಅಭಿಯಂತರು-1, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಬೆಂಗಳೂರು.
5. ಕಾರ್ಯಪಾಲಕ ಅಭಿಯಂತರು-2, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಬೆಂಗಳೂರು
6. ಕಾರ್ಯಪಾಲಕ ಅಭಿಯಂತರು-3, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಬೆಂಗಳೂರು
7. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ತುಮಕೂರು.
8. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಮೈಸೂರು.
9. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಹಾಸನ.
10. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಮಂಗಳೂರು.
11. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ದಾವಣಗೆರೆ.
12. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಧಾರವಾಡ.
13. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಬೆಳಗಾವಿ.
14. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಬಳ್ಳಾರಿ.
15. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಕಲಬುರ್ಗಿ.
16. ಎಲ್ಲಾ ಸಹಾಯಕ ಕಾರ್ಯದರ್ಶಿಗಳು, ಕ.ಕೈ.ಪ್ರ.ಅ.ಮಂಡಳಿ ಕೇಂದ್ರ ಕಛೇರಿ ಹಾಗೂ ವಲಯ ಕಛೇರಿಗಳು.
17. ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿಗಳು.
18. ಕಛೇರಿ ಪ್ರತಿ.